ಪ್ರೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಮಂಡ್ಯ ಜಿಲ್ಲೆಯಲ್ಲಿ ಸಿ.ಬಿ.ಎಸ್.ಇ ಹಾಗೂ ಐ.ಸಿ.ಎಸ್.ಇ. ಪಠ್ಯ ಮತ್ತು ಬೋಧನಾ ಕ್ರಮವುಳ್ಳ ಅಧಿಕೃತ ಶಾಲೆಗಳು ಯಾವುದೂ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ನಗರ ಪ್ರದೇಶದಲ್ಲಿನ ಶಾಲೆಗಳಿಗೆ ಜಿಲ್ಲಾ ಪಂಚಾಯತ್‌ಗಳಿಂದ ಸಮರ್ಪಕವಾಗಿ ಸೌಲಭ್ಯ ಮತ್ತು ಅನುದಾನ ನೀಡದೇ ಇರುವುದು

3511(3832) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಗರ ಪ್ರದೇಶದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಜಿಲ್ಲಾ ಪಂಚಾಯತ್‌ನಿಂದ ದೊರೆಯುತ್ತಿರುವ ಸೌಲಭ್ಯ ಹಾಗೂ ಆರ್ಥಿಕ ಸಹಾಯಗಳೇನು; (ವಿವರ ನೀಡುವುದು);

ಆ) ಜಿಲ್ಲಾ ಪಂಚಾಯತ್‌ನಲ್ಲಿ ನಗರ ಪ್ರದೇಶದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಗಳ ಶಾಲೆಗೆ ಮೂಲಭೂತ ಸೌಕರ್ಯ ಹಾಗೂ ಆರ್ಥಿಕ ಸಹಾಯವನ್ನು ಸಮರ್ಪಕವಾಗಿ ನೀಡದೇ ತಾರತಮ್ಯ ಧೋರಣೆ ಅನುಸರಿಸುತ್ತಾ ಇರುವುದನ್ನು ನಿವಾರಿಸಲು ಸರಕಾರವು ಕ್ರಮಗಳನ್ನೇನಾದರೂ ಆಲೋಚಿಸಿದೆಯೆ; (ವಿವರ ನೀಡುವುದು)

ಪ್ರೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶ ಎಂಬ ತಾರತಮ್ಯ ಇಲ್ಲದೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಈ ಕೆಳಕಂಡ ಎಲ್ಲಾ ಸೌಲಭ್ಯಗಳನ್ನು ಒದಗಿಸಿದೆ.

- ಶಿಕ್ಷಕರ ಮತ್ತು ಸಿಬ್ಬಂದಿಯ ವೇತನ
- ಶಾಲೆಗಳ ನಿರ್ವಹಣೆಗಾಗಿ ಸಾದಿಲ್ವಾರು
- ಶಾಲಾ ಕಟ್ಟಡಗಳ ನಿರ್ಮಾಣ, ದುರಸ್ತಿ, ಶೌಚಾಲಯ ಮತ್ತು ನೀರಿನ ಸೌಲಭ್ಯ ಪೀಠೋಪಕರಣ ಮತ್ತು ಪಾಠೋಪಕರಣ
- ಉಚಿತ ಸಮವಸ್ತ್ರ, ಪಠ್ಯ ಪುಸ್ತಕ, ಬ್ಯಾಗ್ ಸರಬರಾಜು 1 ರಿಂದ 5ನೇ ತರಗತಿಗಳ ಎಲ್ಲಾ ಸರ್ಕಾರಿ ಶಾಲೆಗಳ ಮಕ್ಕಳಿಗೆ ಅಕ್ಷರ ದಾಸೋಹದ ಅಂಗವಾಗಿ ಉಚಿತ ಬಿಸಿ ಊಟದ ವ್ಯವಸ್ಥೆ ಇತ್ಯಾದಿಗಳನ್ನು ಗ್ರಾಮೀಣ ಮತ್ತು ನಗರ ಪ್ರದೇಶ ಎಂಬ ತಾರತಮ್ಯ ಇಲ್ಲದೆ ಜಿಲ್ಲಾ ಪಂಚಾಯತ್‌ಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.
- ನಗರ ಪ್ರದೇಶದ ಮತ್ತು ಗ್ರಾಮೀಣ ಪ್ರದೇಶದ ಸರ್ಕಾರಿ ಪ್ರಾಥಮಿಕ ಶಾಲಾ ಕೊಠಡಿಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

ಜಿಲ್ಲಾ ಪಂಚಾಯತ್‌ಗಳಿಗೆ 2003-04ನೇ ಸಾಲಿಗೆ ಈ ಕೆಳಕಂಡಂತೆ ಅನುದಾನ ಒದಗಿಸಲಾಗಿದೆ

ಕ್ರ. ಸಂ.	ಕಾರ್ಯಕ್ರಮ	ಪ್ರಾಥಮಿಕ ಶಿಕ್ಷಣ ಯೋಜನೆ	ಪ್ರಾಥಮಿಕ ಶಿಕ್ಷಣ ಯೋಜನೇತರ	ಕ್ರ. ಸಂ.	ಕಾರ್ಯಕ್ರಮ	ಪ್ರೌಢ ಶಿಕ್ಷಣ ಯೋಜನೆ	ಪ್ರೌಢ ಶಿಕ್ಷಣ ಯೋಜನೇತರ
1.	ಯಂತ್ರ ಮತ್ತು ಸಾಧನ ಸಾಮಗ್ರಿ ಪೂರೈಕೆ	66.52	–	1.	ಪರಿವೀಕ್ಷಣೆ	2.76	1427.29
2.	ಸೇವೆಯಲ್ಲಿರುವ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮ	9.20	–	2.	ಶಿಕ್ಷಕರ ತರಬೇತಿ	5.68	–
3.	ಗುರುಸದನ	3.29	–	3.	ವಿದ್ಯಾರ್ಥಿವೇತನಗಳು	8.18	6.47
4.	7ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಉತ್ತೇಜನ	0.86	–	4.	ಸಾಧನ ಸಾಮಗ್ರಿಗಳು	77.02	–
5.	ಸರ್ಕಾರಿ ಪ್ರಾಥಮಿಕ ಶಾಲೆಗಳು	549.14	141529.65	5.	ಸೇರ್ಪಡೆ ಮತ್ತು ಮಾರ್ಪಾಡು	113.84	–
6.	ಸೇರ್ಪಡೆ ಮತ್ತು ಮಾರ್ಪಾಡು	130.31	–	6.	ಖಾಸಗಿ ಪ್ರೌಢಶಾಲೆಗಳಿಗೆ ಸಹಾಯ ಾನುದಾನ	216.73	35740.89
7.	ಸರ್ಕಾರೇತರ ಪ್ರಾಥಮಿಕ ಶಾಲೆಗಳಿಗೆ ಸಹಾಯಧನ	70.56	14383.05	7.	ಭೂಮಿ ಮತ್ತು ಕಟ್ಟಡಗಳ ಖರೀದಿ	16.66	–

ಕ್ರ. ಸಂ.	ಕಾರ್ಯಕ್ರಮ	ಪ್ರಾಥಮಿಕ ಶಿಕ್ಷಣ ಯೋಜನೆ	ಯೋಜನೇತರ	ಕ್ರ.	ಕಾರ್ಯಕ್ರಮ	ಪ್ರೌಢ ಶಿಕ್ಷಣ ಯೋಜನೆ	ಯೋಜನೇತರ
8.	ಪರಿವೀಕ್ಷಣೆ	2.89	3613.28	8.	ನಮೂನೆ ಮತ್ತು ವಹಿಗಳ ಮುದ್ರಣ ಮತ್ತು ಸರಬರಾಜು	32.84	–
9.	ವಿದ್ಯಾರ್ಥಿವೇತನಗಳು	28.28	–	9.	ಸೆಕೆಂಡರಿ ಶಾಲಾ ಕಟ್ಟಡಗಳು	466.69	–
10.	ಪ್ರಾಥಮಿಕ ಶಾಲಾ ಕಟ್ಟಡಗಳು	407.47	–	10.	ಸರ್ಕಾರಿ ಸೆಕೆಂಡರಿ ಶಾಲೆಗಳು	1099.91	29296.02
11.	ಶಾಲಾ ಮಾತೆಯರ ನೇಮಕಾತಿ	–	2398.98	11.	ಹಿಂದಿ ಶಿಕ್ಷಕರ ನೇಮಕಾತಿ	99.85	743.75
12.	7ನೇ ತರಗತಿ ಪರೀಕ್ಷೆಗಳು	–	25.65	12.	ರಾಷ್ಟ್ರೀಯ ಗ್ರಾಮಾಂತರ ವಿದ್ಯಾರ್ಥಿ ವೇತನ	–	21.03
13.	ನರ್ಸರಿ ಶಾಲಾ ಶಿಕ್ಷಕರ ನೇಮಕಾತಿ	–	20.84	13.	ದೈಹಿಕ ಶಿಕ್ಷಕರ ನೇಮಕಾತಿ	–	270.99
14.	ಪ.ಜಾತಿ/ವರ್ಗದ ನಿವಾಸಿ ಶಾಲೆಗಳು	–	52.11	14.	ಗಾಂಧೀ ಗ್ರಾಮೀಣ ಗುರುಕುಲ ಹೊಸರಿತ್ತಿ	–	31.96

ಕ್ರ. ಸಂ.	ಕಾರ್ಯಕ್ರಮ	ಪ್ರಾಥಮಿಕ ಶಿಕ್ಷಣ ಯೋಜನೆ	ಪ್ರಾಥಮಿಕ ಶಿಕ್ಷಣ ಯೋಜನೇತರ	ಕ್ರ.	ಕಾರ್ಯಕ್ರಮ	ಪ್ರೌಢ ಶಿಕ್ಷಣ ಯೋಜನೆ	ಪ್ರೌಢ ಶಿಕ್ಷಣ ಯೋಜನೇತರ
15.	ಪೂರ್ವಪ್ರಾಥಮಿಕ ಶಾಲೆಗಳು	–	372.16	15.	ನಿರ್ವಹಣೆ ಮತ್ತು ಸಹಾಯಧನ	–	377.26
				16.	ರಕ್ಷಣಾ ಸೇವಾ ಸಿಬ್ಬಂದಿ ಅವಲಂಬಿತರಿಗೆ ಸಹಾಯ	–	31.67
				17.	ವಿವಿಧ ಸಮಸ್ಯೆಗಳಿಗೆ ಸಹಾಯಾನುದಾನ	–	35936
				18.	ಸ್ಥಳೀಯ ಸಂಸ್ಥೆಗಳ ಸೆಕೆಂಡರಿ ಶಾಲೆಗಳು	–	4642.12
				19.	ನಿವಾಸಿ ಪ್ರೌಢಶಾಲೆಗಳು	–	32.27